**ಸಾಕ್ಷಿಗೆ ದಿನಾಂಕಃ09-07-2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಃ ವಾದಿ ಪರಃ ಶ್ರೀ.ಕೆ ಸಿ ಸಿ ವಕೀಲರಿಂದ ಃ**

4.ನಾನು ವಾದಿಯ ಜಮೀನನ್ನು ಯಾವತ್ತೂ ಸಹ ಒತ್ತುವರಿ ಮಾಡಿರುವುದಿಲ್ಲ. ದಾವಾ ಆಸ್ತಿಗಳನ್ನು ಭೂ ಮಾಪಕರಿಂದ ಸರ್ವೆ ಮಾಡಿಸಿದ ಪಕ್ಷದಲ್ಲಿ ಯಾರಿಗೆ ಎಷ್ಟು ವಿಸ್ತೀರ್ಣದ ಜಾಗ ಬರಬೇಕೆಂದು ತಿಳಿದು ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ಸರ್ವೆ ನಂಬರ್ ಜಾಗದಲ್ಲಿ 13 ಜನರ ಜಮೀನು ಇದ್ದು, ಅಷ್ಟು ಜಾಗ ಸರ್ವೆ ಆಗಬೇಕಾಗುತ್ತದೆ ಎಂದು ಉತ್ತರಿಸಿರುತ್ತಾರೆ. ನಮ್ಮ ಮತ್ತು ವಾದಿಯ ನಡುವೆ ದಾವಾ ಆಸ್ತಿಗಳ ಸ್ವಾಧೀನದ ಆಧಾರದಲ್ಲಿ ಈ ವರೆಗೂ ನಕ್ಷೆ ತಯಾರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಂದರೆ ಪ್ರತಿವಾದಿಗಳು ವಾದಿಗೆ ಸಂಬಂಧ ಪಟ್ಟ 13 ಗುಂಟೆ ಜಾಗವನ್ನು ಒತ್ತುವರಿ ಮಾಡಿಕೊಂಡು ಇಂದಿಗೂ ಸಹ ಸದರಿ ಜಾಗವು ನಮ್ಮ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

5. ವಾದಿಯು ದಾವಾ ಆಸ್ತಿಗಳ ಸರ್ವೆ ಕೋರಿ ಅರ್ಜಿ ಸಲ್ಲಿಸಿದ ಸಮಯದಲ್ಲಿ ನಾವುಗಳು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿರುವ ವಿಚಾರ ಅವರಿಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ನಾವು ಒತ್ತುವರಿ ಮಾಡಿರುವ 13 ಗುಂಟೆ ವಾದಿಗೆ ಸಂಬಂಧ ಪಟ್ಟ ಜಾಗವನ್ನು ಬಿಟ್ಟು ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಃ ಮರು ವಿಚಾರಣೆ ಇಲ್ಲಃ**

**(ದಿನಾಂಕಃ09-07-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂಃ ಶೃಂಗೇರಿ**